ಸಾಕ್ಷಿಯನ್ನು ದಿ: 24.08.2024 ರಂದು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು. ಡಿ.ಡಬ್ಲ್ಯೂ-1

**ಪಾಟೀಸವಾಲುಃ- ವಾದಿಗಳ ಪರ ವಕೀಲರಿಂದ ಃ-**

1. ವಾದಿ ನನ್ನ ದೊಡ್ಡಪ್ಪನ ಸೊಸೆಯಾಗಬೇಕು. ನನ್ನ ತಂದೆ ಜವರಾಯಿಗೌಡ ಹಾಗೂ ನನ್ನ ದೊಡ್ಡಪ್ಪ ಕರೀಗೌಡ ಸ್ವಂತ ಸಹೋದರರಾಗಿರುತ್ತಾರೆ. ನನ್ನ ತಂದೆ ಹಾಗೂ ದೊಡ್ಡಪ್ಪ ಈಗ ಮರಣ ಹೊಂದಿರುತ್ತಾರೆಂದರೆ ಸರಿ. ನನ್ನ ತಂದೆಗೆ 4 ಜನ ಮಕ್ಕಳು ಅವರೆಂದರೆ ಮೊಳ್ಳೇಗೌಡ ಉಃ ನಿಂಗೇಗೌಡ, ಕೆಂಪೇಗೌಡ, ನಾನು ಮತ್ತು ಚಿಕ್ಕಸ್ವಾಮೀಗೌಡ. ನಾವು ಬೇರೆ ಬೇರೆಯಾಗಿ ವಾಸ ಮಾಡುತ್ತೇವೆ. ನನ್ನ ದೊಡ್ಡಪ್ಪ ಕರೀಗೌಡನಿಗೆ 4 ಜನ ಮಕ್ಕಳು ಅವರೆಂದರೆ ಮೂಗೇಗೌಡ ಉಃ ನಿಂಗೇಗೌಡ, ಮೋಟೇಗೌಡ, ಮರಿಲಿಂಗೇಗೌಡ, ನಾಗೇಗೌಡ. ದಾವಾ ಆಸ್ತಿಯ ಮೂಲ ಸರ್ವೆ ನಂ.22/6 ಇರುತ್ತದೆ. ನನ್ನ ತಂದೆ ಹಾಗೂ ದೊಡ್ಡಪ್ಪನಿಗೆ ಮೂಲತಃ ಸರ್ವೆ ನಂ.22/6 ರಲ್ಲಿ ಒಟ್ಟು 36 ಗುಂಟೆ ಜಮೀನಿತ್ತು. ನನ್ನ ತಂದೆ ಹಾಗೂ ದೊಡ್ಡಪ್ಪ ತಲಾ 18 ಗುಂಟೆ ವಿಭಾಗ ಮಾಡಿಕೊಂಡಿದ್ದರು. ನನ್ನ ತಂದೆ ಉತ್ತರದ ಕಡೆ ಮತ್ತು ದೊಡ್ಡಪ್ಪ ದಕ್ಷಿಣದ ಕಡೆಗೆ ವಿಭಾಗ ಮಾಡಿಕೊಂಡಿರುತ್ತಾರೆ. ನನ್ನ ತಂದೆಯ ಭಾಗಕ್ಕೆ ಬಂದ 18 ಗುಂಟೆ ಜಮೀನಿನ ಚೆಕ್ಕುಬಂದಿ ಪೂರ್ವಕ್ಕೆಃ ನಿಂಗೇಗೌಡ ಮತ್ತು ಕೆಂಪೇಗೌಡ, ಪಶ್ಚಿಮಕ್ಕೆಃ ನನ್ನ ಮತ್ತು ಚಿಕ್ಕಸ್ವಾಮಿಗೌಡನ ಜಮೀನು. ಉತ್ತರಕ್ಕೆಃ ನಾಗೇಗೌಡ, ಮಾದೇಗೌಡ, ಮರೀಗೌಡ, ನಿಲೇಗೌಡ ಮತ್ತು ಇತರರ ಜಮೀನು, ದಕ್ಷಿಣಕ್ಕೆಃ ನನ್ನ ದೊಡ್ಡಪ್ಪ ಕರೀಗೌಡನ ಭಾಗಕ್ಕೆ ಬಂದ ಜಮೀನು. ಸದರಿ ನನ್ನ ತಂದೆಯ ಭಾಗದ ಸ್ವತ್ತಿನಲ್ಲಿ ಈಗ ಮನೆಗಳನ್ನು ಕಟ್ಟಿಕೊಂಡಿರುತ್ತೇವೆ. ನನ್ನ ತಂದೆಯ ಭಾಗದ ಜಮೀನನ್ನು ಅನ್ಯಕ್ರಾಂತವನ್ನು ಮಾಡಿಸಿರುತ್ತೇನೆ. ಅನ್ಯಕ್ರಾಂತ ನನ್ನ ತಮ್ಮ ಚಿಕ್ಕಸ್ವಾಮಿಗೌಡನ ಹೆಸರಿಗೆ ಆಗಿರುತ್ತದೆ. ನನ್ನ ದೊಡ್ಡಪ್ಪ ಕರೀಗೌಡನ ಭಾಗಕ್ಕೆ ಬಂದ ಜಮೀನಿನ ಚೆಕ್ಕುಬಂದಿ ಗೊತ್ತಿಲ್ಲ. ನನ್ನ ದೊಡ್ಡಪ್ಪನ ಭಾಗಕ್ಕೆ ಬಂದ ಜಮೀನನ್ನು ಅನ್ಯಕ್ರಾಂತ ಮಾಡಿಸಿರುವುದಿಲ್ಲ. ನನ್ನ ತಂದೆ ಭಾಗದ ಸ್ವತ್ತನ್ನು ನಾವು ಸಹೋದರರು ತಲಾ 4 ½ ಗುಂಟೆ ಹಂಚಿಕೊಂಡಿರುತ್ತೇವೆ. ನನ್ನ ಭಾಗದ 4 ½ ಗುಂಟೆ ಚೆಕ್ಕುಬಂದಿ ಪೂರ್ವಕ್ಕೆಃ ನನ್ನ ದೊಡ್ಡಪ್ಪನ ಮಗ ನಾಗೇಗೌಡನ ಜಮೀನು, ಪಶ್ಚಿಮಕ್ಕೆಃ ನನ್ನ ತಮ್ಮ ಚಿಕ್ಕಸ್ವಾಮಿಗೌಡ, ಉತ್ತರಕ್ಕೆಃ ರಸ್ತೆ, ದಕ್ಷಿಣಕ್ಕೆಃ ನಮಗೆ ಸೇರಿದ ಹಿತ್ತಲು ಜಾಗ.

2. ದಾವಾ ಸ್ವತ್ತಿನ ಪೂರ್ವಕ್ಕೆ ನಾಗೇಗೌಡನ ಜಮೀನು ಎಂದರೆ ಸರಿ. ಪಶ್ಚಿಮಕ್ಕೆ ನನ್ನ ಮನೆ ಬರುತ್ತದೆ ಎಂದರೆ ಸರಿ. ಉತ್ತರಕ್ಕೆ ರಸ್ತೆ ಎಂದರೆ ಸರಿ. ದಕ್ಷಿಣಕ್ಕೆಃ ಮೋಟೇಗೌಡನ ಜಮೀನು ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಒಂದು ಮಂಗಳೂರು ಹೆಂಚಿನ ಮನೆ, ಶೀಟಿನ ಮನೆ ಮತ್ತು ಖಾಲಿ ಜಾಗ ಇದೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ 3 ತೆಂಗಿನ ಮರಗಳು, ಸಂಪಿಗೆ ಮರ, ಹತ್ತಿ ಮರ ಮತ್ತು ಸುಜ್ಜಲಿ ಮರ ಇದೆ ಎಂದರೆ ಸರಿಯಲ್ಲ. ನನ್ನ ದೊಡ್ಡಪ್ಪನ ಆಸ್ತಿಯನ್ನು ಅವರ ಮಕ್ಕಳು ವಿಭಾಗ ಮಾಡಿಕೊಂಡಾಗ 7 ಗುಂಟೆ ಜಮೀನು ಮರಿಲಿಂಗೇಗೌಡನ ಭಾಗಕ್ಕೆ ಹೋಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಮರಿಲಿಂಗೇಗೌಡ ನನ್ನ ತಮ್ಮ ಚಿಕ್ಕಸ್ವಾಮಿ ಹಾಗೂ ಇತರರ ವಿರುದ್ದ 1994 ರಲ್ಲಿ ಅಸಲು ದಾವಾ ಸಂಃ 96/1994 ನ್ನು ಸಲ್ಲಿಸಿದ್ದ ಎಂದರೆ ಸರಿ. ಸದರಿ ನಿಡಿ.2 ಮತ್ತು 3 ರ ದಾವೆ ಹಾಕುವ ಸಮಯದಲ್ಲಿ ನಾನು ಈಗ ವಾಸವಿರುವ ಮನೆ ಕಟ್ಟಲು ಪ್ರಾರಂಭಿಸಿದ್ದೆ ಎಂದರೆ ಸರಿ. ಆ ಸಮಯದಲ್ಲಿ ನಾನು ಮತ್ತು ನನ್ನ ಸಹೋದರರು ಒಟ್ಟಿಗೆ ಇದ್ದೆವು ಎಂದರೆ ಸರಿ. ನಿಡಿ.2 ಮತ್ತು 3 ರ ದಾವೆಯ ಚೆಕ್ಕುಬಂದಿ ಗೊತ್ತಿಲ್ಲ. ನಾವು ಮನೆ ಕಟ್ಟಿದ ನಂತರ ಅಣ್ಣ ತಮ್ಮಂದಿರು ವಿಭಾಗ ಮಾಡಿಕೊಂಡಿರುತ್ತೇವೆಂದರೆ ಸರಿ. ಸದರಿ ಮನೆಯನ್ನು ಭಾಗ ಮಾಡಿಕೊಂಡಾಗ ನನ್ನ ಭಾಗದ ಮನೆ ದಾವಾ ಆಸ್ತಿಯ ಪಶ್ಚಿಮಕ್ಕೆ ಬಂದಿರುತ್ತದೆಂದರೆ ಸರಿಯಲ್ಲ. ನಿಡಿ.2 ಮತ್ತು 3 ರ ದಾವೆಯಲ್ಲಿ ನನ್ನ ತಮ್ಮ ತಕರಾರು ಸಲ್ಲಿಸಿದ್ದ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು ಮುಂದೂಡಲಾಯಿತು.**

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

ಪ್ರಧಾನ ಸಿ.ಜೆ. ಮತ್ತು ಜೆ.ಎಂಎಫ್.ಸಿ
ಮಳವಳ್ಳಿ